
## ಪುಸ್ತಕ ಪರಿಚಯ




*ಕೃತಿ :* **ವಿವೇಕ ವಿಹಾರ**
*ಲೇಖಕರು:* **ಡಾ. ಡಿ.ಕೆ.ರಾಜೇಂದ್ರ**
*ಪ್ರಕಾಶಕರು :* **ಕಣ್ವ ಪ್ರಕಾಶನ,**
'ಕಾಲ ಕನಸು', ನಂ.894,
1ನೇ ಮೇನ್, ನಿಸರ್ಗ ಬಡಾವಣೆ,
ಚಂದ್ರಾ ಲೇಔಟ್,
ಬೆಂಗಳೂರು, 560072
ಫೋನ್: 080-23206778
*ಪುಟಗಳು :* **144**
*ಬೆಲೆ* : **ರೂ. 105/-**

ಇತ್ತೀಚೆಗೆ ಸ್ವಾಮಿ ವಿವೇಕಾನಂದರ ಹೆಸರು ಭಾರತದಾದ್ಯಂತ ಹಳ್ಳಿ ಹಳ್ಳಿಗಳಲ್ಲೂ, ನಗರ ಪ್ರದೇಶಗಳಲ್ಲೂ ಜನಜನಿತವಾಗುತ್ತಿದೆ. ನಮ್ಮ ರಾಷ್ಟ್ರೀಯ ನಾಯಕನೆಂದೇ ಗುರುತಿಸಲ್ಪಟ್ಟಿರುವ ಸ್ವಾಮೀಜಿಯವರ ಸ್ಫೂರ್ತಿಯ ನುಡಿಗಳು ಭಾರತೀಯ ಯುವಕರ ಪಾಲಿಗಂತೂ ಅದಮ್ಯ ಉತ್ಸಾಹದ ಕಿಡಿಯಂತೆ ಕೆಲಸ ಮಾಡುತ್ತಿವೆ. ವಿವಿಧ ಸಂದರ್ಭಗಳಲ್ಲಿ ಸ್ವಾಮೀಜಿಯವರನ್ನು ಕುರಿತು **'ವಿವೇಕ ಪ್ರಭ'** ಹಾಗೂ **'ವಿವೇಕ ದೀಪ್ತಿ'** ಪತ್ರಿಕೆಗಳಲ್ಲಿ ಪ್ರಕಟವಾದ ಹಲವು ಲೇಖನಗಳನ್ನು ಒಂದು ಸಂಕಲನವಾಗಿಸಿ, 'ವಿವೇಕವಿಹಾರ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ, ಕನ್ನಡದ ಹಿರಿಯ ವಿದ್ವಾಂಸರೂ ಉತ್ತಮ ಲೇಖಕರೂ ಆದ ಡಾ. ಡಿ.ಕೆ. ರಾಜೇಂದ್ರ ಅವರು. ಸ್ವಾಮಿ ವಿವೇಕಾನಂದರ ಜೀವನ, ಸಂದೇಶ, ಅವರ ವ್ಯಕ್ತಿತ್ವದ ವಿವಿಧ ಮುಖಗಳು, ವಿವಿಧ ವಿಷಯಗಳನ್ನು ಕುರಿತಂತೆ ಸ್ವಾಮೀಜಿ ದೃಷ್ಟಿ – ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಹದಿನೆಂಟು ಲೇಖನಗಳು ಇಲ್ಲಿವೆ. 'ವಿಶ್ವ ವಂದನೀಯ ವಿರಾಗಿ', 'ಶ್ರದ್ಧೆ– ಶಕ್ತಿಯ ಮೂಲ', 'ಆತ್ಮವಿಶ್ವಾಸದ ಬಗ್ಗೆ ಸ್ವಾಮಿ ವಿವೇಕಾನಂದರು', 'ಶ್ರದ್ಧೆಯನ್ನು ಕುರಿತು', 'ಕುವೆಂಪು ಕಂಡ ಸ್ವಾಮಿ ವಿವೇಕಾನಂದರು' ಮೊದಲಾದ ಲೇಖನಗಳ ಶೀರ್ಷಿಕೆಗಳೇ ಇಲ್ಲಿನ ವಿಷಯ–ವಿಸ್ತಾರವನ್ನು ವಿಶದಪಡಿಸುತ್ತವೆ. ಸ್ವಾಮಿ ವಿವೇಕಾನಂದರ ಜೀವನ, ಕೃತಿಗಳ ಆಳವಾದ ಅಧ್ಯಯನದ ಹಿನ್ನೆಲೆಯೊಂದಿಗೆ, ಆಧುನಿಕ ಸಮಾಜಕ್ಕೆ ಅವರ ಆದರ್ಶ, ಧ್ಯೇಯಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯದ ಬಗ್ಗೆ ಲೇಖಕರಿಗಿರುವ ಕಾಳಜಿ, ಸಾಮಾಜಿಕ ಪ್ರಜ್ಞೆ, ಈ ಲೇಖನಗಳ ಉದ್ದಗಲಕ್ಕೂ ಕಂಡುಬರುತ್ತದೆ.

ಈ ಪುಸ್ತಕದ ಆರಂಭದಲ್ಲಿ ಮುನ್ನುಡಿ ಬರೆದಿರುವ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು ಹೇಳಿರುವ ಈ ಕೆಳಗಿನ ನುಡಿಗಳು ಗಮನಾರ್ಹ: ''ಈ ಪುಸ್ತಕವು ನಮ್ಮನ್ನು ಕರೆಯುವುದು ಹೊತ್ತು ಕಳೆಯಲು ಮಾಡಿರುವ ಮೋಜಿನ ವಿಹಾರಕ್ಕಲ್ಲ; ಮನಸ್ಸು–ಬುದ್ಧಿಗಳ ಕ್ಷಿತಿಜವನ್ನು ವಿಸ್ತರಿಸುವ ಜ್ಞಾನವಿಹಾರಕ್ಕೆ! ಸ್ವಾಮಿ ವಿವೇಕಾನಂದರ ವಿರಾಟ್ ವ್ಯಕ್ತಿತ್ವದ ಹತ್ತು ಹಲವು ಮುಖಗಳನ್ನು ನಮಗೆ ದರ್ಶನ ಮಾಡಿಸುತ್ತಾ, ನಮ್ಮ ದೈನಂದಿನ ಜೀವನದ ಮತ್ತು ನಮ್ಮ ವ್ಯಕ್ತಿತ್ವದ ವಿವಿಧ ಮಗ್ಗಲುಗಳ ಮೇಲೆ ಪರಿಣಾಮಕಾರಿಯಾದ ಬೆಳಕನ್ನು ಚೆಲ್ಲಿ ಎಚ್ಚರಿಸುತ್ತದೆ, ಈ ಕೃತಿ. ಸುಲಭವಾಗಿ ಓದಿಸಿಕೊಳ್ಳುತ್ತಾ ಏಕಕಾಲಕ್ಕೆ ನಮ್ಮನ್ನು ಭಾವಶುದ್ಧಿ ಮತ್ತು ಇಚ್ಛಾಶಕ್ತಿಯ ಸಮೃದ್ಧಿಯೆಡೆಗೆ ಒಯ್ಯುತ್ತದೆ. ''

ಈ ಪುಸ್ತಕದಲ್ಲೊಂದು ವಿಶೇಷತೆಯನ್ನು ಗಮನಿಸಬಹುದು. ಇಲ್ಲಿನ ಹಲವು ವಸ್ತು, ವಿಷಯಗಳ ಮಧ್ಯೆ ಕೇವಲ ಸ್ವಾಮಿ ವಿವೇಕಾನಂದರ ಧ್ಯೇಯ–ಆದರ್ಶ ಹಾಗೂ ಚಿಂತನೆಗಳಿಗೆ ಮಾತ್ರ ಸೀಮಿತವಾಗದ, ಸಮಾಜ ಹಾಗೂ ಪ್ರಸ್ತುತ ಜಗತ್ತಿನ ವಿದ್ಯಮಾನಗಳಿಗೆ ಸಂಬಂಧಪಡುವ ಕೆಲವು ವಿಚಾರಗಳೂ ನಡುನಡುವೆ ಇಣುಕುತ್ತವೆ. ಇದಕ್ಕೆ ಒಳ್ಳೆಯ ಒಂದು ಉದಾಹರಣೆ, 'ಕಲಾಕ್ಷೇತ್ರದಲ್ಲಿನ ಮೌಲ್ಯಗಳು' ಎಂಬ ಲೇಖನ. ಸ್ವಾಮಿ ವಿವೇಕಾನಂದರ ಮಾತಿನ ಉದ್ಧರಣೆಯೊಂದಿಗೆ ಲೇಖನ ಆರಂಭವಾಗಿದೆ; ಆದರೆ ಮುಂದೆ ಕಲೆ, ಸಂಸ್ಕೃತಿ, ನೈತಿಕತೆ ಮೊದಲಾದ ವಿಷಯಗಳ ನಿರ್ವಚನ, ವಿಶ್ಲೇಷಣೆ ಮುಂದುವರಿದು, ಇಲ್ಲಿ ಚರ್ಚಿಸಲಾಗಿರುವ ವಿಷಯದ ಪರಿಧಿ ವಿಸ್ತರಿಸುತ್ತಾ, ಆರ್ನಾಲ್ಡ್, ಎಲಿಯೆಟ್ ಹಾಗೂ ಜಾನಪದ ಚಿಂತನೆಗಳತ್ತ ವ್ಯಾಪಿಸುತ್ತದೆ. ಒಟ್ಟು ಬದುಕಿನ ವಿವಿಧ ಆಯಾಮಗಳಿಗೆ ಒಂದು ಕೇಂದ್ರ ಬಿಂದುವಿರುವಂತೆ, ಇಲ್ಲಿನ ಹಲವು ಚಿಂತನೆಗಳ ಆಳದಲ್ಲಿ ಸ್ವಾಮೀಜಿ ವಿಚಾರಗಳು ಏಕಸೂತ್ರತೆಯನ್ನು ಸಾಧಿಸುವ ಕೊಂಡಿಯಾಗಿ ಕಾಣಿಸಿಕೊಂಡಿದೆ. ವ್ಯಕ್ತವಾಗಿ, ಪ್ರಮುಖವಾಗಿ ಸ್ವಾಮಿ ವಿವೇಕಾನಂದರನ್ನು ಕುರಿತು ಬರೆದ ಲೇಖನಗಳಲ್ಲೂ ಈ ಅಂಶವನ್ನು ಗುರುತಿಸಬಹುದು. ದೇಶ, ಕಾಲ, ಸಂದರ್ಭಗಳ ಪರಿಮಿತಿಯಲ್ಲಿ ವ್ಯಕ್ತಗೊಂಡ ಮಹಾಪುರುಷರೊಬ್ಬರ ವಿಚಾರಗಳು ಈ ಎಲ್ಲ ಮಿತಿಗಳನ್ನೂ ಮೀರಿ ಹೇಗೆ ಸಾರ್ವತ್ರಿಕ ಮೌಲ್ಯಗಳಾಗಿ ಪ್ರಸ್ತುತವಾಗುವವು ಎಂಬುದನ್ನು ಈ ಸಂಕಲನದ ಲೇಖನಗಳು ತೋರಿಸಿಕೊಟ್ಟಿವೆ.

ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ, ಪ್ರಸ್ತುತ ಸಂದರ್ಭಕ್ಕೆ ಅನ್ವಯವಾಗುವ ದೃಷ್ಟಿಯಿಂದ ಪರಿಶೋಧಿಸುವ ಅನ್ವೇಷಕನ ಮನೋಭಾವ ಇಲ್ಲಿನ ಬರಹಗಳಲ್ಲಿ ವ್ಯಕ್ತವಾಗಿವೆ. ಸರಳ ಶೈಲಿ ಹಾಗೂ ಗಂಭೀರ ಧಾಟಿಯ ಈ ಲೇಖನಗಳ ಸಂಕಲನವು ಸುಂದರ ವಿನ್ಯಾಸ, ಸುಲಭ ಬೆಲೆ ಹಾಗೂ ಸೀಮಿತ ಗಾತ್ರದಿಂದ ಕೂಡಿ ಆಕರ್ಷಕವೆನಿಸಿದೆ. ಸ್ವಾಮೀಜಿ ವಿಚಾರಧಾರೆಗಳಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕವಿದು.